ಆ) ವಿಷಯ : ತುರುವೇಕೆರೆ ತಾಲ್ಲೂಕಿನ ತಹಸೀಲ್ದಾರ್ ಕಛೇರಿಯಲ್ಲಿ ನೂರಾರು ಆರ್.ಟಿ.ಸಿ.ಗಳನ್ನು ತಿದ್ದಿರುವ ಬಗ್ಗೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೂಕಿನ ತಹಸೀಲ್ದಾರ್ ಕಛೇರಿಯಲ್ಲಿ ನೂರಾರು ಆರ್.ಟಿ.ಸಿ.ಗಳನ್ನು ತಿದ್ದಿರುವ ಬಗ್ಗೆ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ತುರುವೇಕೆರೆ ತಾಲ್ಲೂಕು ನಾಗಲಾಪುರ ಗ್ರಾಮದ ಸಂ.ನಂ. 353ಕ್ಕೆ ಸಂಬಂಧಿಸಿದ ಎಂ.ಆರ್. 17/2007–08ರ ಪ್ರಕರಣದಲ್ಲಿ ತಪ್ಪಾಗಿ ಹಕ್ಕು ಬದಲಾವಣೆ ಮಾಡಿರುವುದು ಕಂಡುಬಂದ ತಕ್ಷಣವೇ ಉಪವಿಭಾಗಾಧಿಕಾರಿಗಳು ತಿಪಟೂರು ಇವರು ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಕಛೇರಿಯ ಸಿಬ್ಬಂದಿಗಳಾದ ಶ್ರೀ ಜಿ.ಎಂ. ರಂಗಸ್ವಾಮಿ, ಆಪರೇಟರ್, (ಗ್ರಾಮಲೆಕ್ಕಿಗ) ಶ್ರೀ ಜಿ.ಪಿ. ಪರವೇಶ್ ದ್ವಿ.ದ.ಸ. ಹಾಗೂ ಶ್ರೀ ಟಿ.ಸಿ. ಜಯಪ್ರಕಾಶ್, ಪ್ರಭಾರ ಕಂದಾಯ ತನಿಖಾಧಿಕಾರಿ, ದೆಬ್ಬೇಘಟ್ಟ ಹೋಬಳಿ ಇವರುಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದು, ಇಲಾಖಾ ವಿಚಾರಣೆ ಕಾಯ್ದಿರಿಸಿ, ಜಿಲ್ಲಾಧಿಕಾರಿಗಳು, ತುಮಕೂರು ಇವರ ಆದೇಶ ಸಂಖ್ಯೆ ಸಿಬ್ಬಂದಿ(1) ಸಿಸಿಎ.ವಿವ.2/09–10 ದಿನಾಂಕ: 07–08–2009ರ ಆದೇಶ ರೀತ್ಯಾ ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ. ಇದೇ ರೀತಿ ಕಛೇರಿಯಲ್ಲಿ ಆರ್.ಟಿ.ಸಿ. ದಾಖಲೆಗಳನ್ನು ಕಂಪ್ಯೂಟರ್ ಆಪರೇಟರ್‌ಗಳು ಹಾಗೂ ಇತರೆ ಸಿಬ್ಬಂದಿಯವರು ಉಪ ವಿಭಾಗಾಧಿಕಾರಿಗಳವರ ಆದೇಶವಿಲ್ಲದೆ "ಉಪ ವಿಭಾಗಾಧಿಕಾರಿಗಳ ಆದೇಶ", "ಕೋರ್ಟ್ ಆದೇಶ" ಎಂಬ ಆಯ್ಕೆಯನ್ನು ಕಂಪ್ಯೂಟರ್ ಕೇಂದ್ರದಲ್ಲಿ ಉಪಯೋಗಿಸಿಕೊಂಡು ಒಟ್ಟು 197 ಪ್ರಕರಣಗಳಲ್ಲಿ ಆರ್.ಟಿ.ಸಿ. ಗಳನ್ನು ಬದಲಾವಣೆ ಮಾಡಿರುವುದು ತನಿಖೆಯಿಂದ ಕಂಡು ಬಂದಿರುತ್ತದೆ.

ಈ ಕೆಳಕಂಡ ನೌಕರರು ಸಹ ಮೇಲ್ನೋಟಕ್ಕೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆಂದು ತಹಶೀಲ್ದಾರರು ವರದಿ ಸಲ್ಲಿಸಿದ್ದಾರೆ.

1. ಶ್ರೀ ಎನ್.ಜಿ. ಹರೀಶ್ ಕುಮಾರ್, ಆಪರೇಟರ್ (ಹಾಲಿ ತಿಪಟೂರು ತಾಲ್ಲೂಕು ಕಛೇರಿ).

2. ಶ್ರೀ ಎಸ್. ಹರೀಶ್‌ಕುಮಾರ್, ಆಪರೇಟರ್ (ಹಾಲಿ ಭೂಮಿ ಕೇಂದ್ರ ತುರುವೇಕೆರೆ ತಾಲ್ಲೂಕು ಕಛೇರಿ).

3. ಶ್ರೀಮತಿ ಬಿ.ಕೆ. ಆಶಾ, ಆಪರೇಟರ್ (ಹಾಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿ).

4. ಶ್ರೀ ಸಣ್ಣಕರಿಯಪ್ಪ, ಕಂದಾಯ ನಿರೀಕ್ಷಕರು, ದಂಡಿನಶಿವರ ಹೋಬಳಿ.

5. ಶ್ರೀ ನಾರಾಯಣಪ್ಪ, ಕಂದಾಯ ನಿರೀಕ್ಷಕರು, ಕಸಬಾ ಹೋಬಳಿ.

6. ಶ್ರೀ ನಾರಾಯಣಮೂರ್ತಿ, ಕಂದಾಯ ನಿರೀಕ್ಷಕರರು, ಮಾಯಸಂದ್ರ ಹೋಬಳಿ.

7. ಶ್ರೀ ಎನ್. ರಮೇಶ್, ಕಂದಾಯ ನಿರೀಕ್ಷಕರು, ಕಸಬಾ ಹೋಬಳಿ (ಹಾಲಿ ಗ್ರಾಮಲೆಕ್ಕಿಗ, ಮಾದಿಹಳ್ಳಿ, ತುರುವೇಕೆರೆ ತಾಲ್ಲೂಕು).

8. ಶ್ರೀ ಮಹಾಲಿಂಗಪ್ಪ ಆರ್., ನಿವೃತ್ತ ಕಂದಾಯ ನಿರೀಕ್ಷಕರು, ದಬ್ಬೇಘಟ್ಟ ಹೋಬಳಿ.

9. ಶ್ರೀ ನಾರಾಯಣಪ್ಪ, ನಿವೃತ್ತ ಕಂದಾಯ ನಿರೀಕ್ಷಕರು, ಕಸಬಾ ಹೋಬಳಿ (ಹಾಲಿ ವಾಸ ಸರಸ್ವತಿಪುರಂ, ವಿದ್ಯಾನಿಕೇತನ ಶಾಲೆ ಹತ್ತಿರ, ತುಮಕೂರು).

10. ಶ್ರೀ ಜೆ.ಬಿ. ರಾಜು, ಹಕ್ಕು ದಾಖಲೆ ಶಿರಸ್ತೇದಾರ್ (ಹಾಲಿ ಕನಕಪುರ ತಾಲ್ಲೂಕು ಕಛೇರಿ).

11. ಶ್ರೀ ಹೆಚ್.ಎನ್. ವೆಂಕಟಪ್ಪ, ತಾಲ್ಲೂಕು ಶಿರಸ್ತೇದಾರ್, ತುರುವೇಕೆರೆ ತಾಲ್ಲೂಕು ಕಛೇರಿ.

ತಹಶೀಲ್ದಾರರ ವರದಿಯ ಆಧಾರದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸ್ಪಷ್ಟ ಶಿಫಾರಸ್ಸನ್ನು ಮಾಡಲು ಉಪವಿಭಾಗಾಧಿಕಾರಿಗಳು, ತಿಪಟೂರು ಇವರಿಗೆ ಆದೇಶಿಸಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿದೆ.

ಅಕ್ರಮವೆಸಗಿರುವ 197 ಪ್ರಕರಣಗಳಲ್ಲಿ ಎರಡು ಪ್ರಕರಣಗಳು ಅಕ್ರಮವಾಗಿರುವುದು ಗಮನಿಸಲಾಗಿದೆ, ಅವುಗಳ ಬಗ್ಗೆ

ವಿಚಾರಣೆಗೊಳಪಡಿಸಿ, ಕಾನೂನು ಬದ್ಧವಾದ ಆದೇಶ ಹೊರಡಿಸಲಾಗಿದೆ. ಉಳಿದ 195 ಪ್ರಕರಣಗಳಲ್ಲಿ ಅಧಿಕಾರಯುತ ಉಪ ವಿಭಾಗಾಧಿಕಾರಿಗಳ ಆದೇಶವನ್ನು ಪಡೆಯದೇ, ತಿದ್ದುಪಡಿ ಮಾಡಿರುವುದನ್ನು ವಿಚಾರಣೆಗೊಳಪಡಿಸಲಾಗಿದ್ದು, ಹೆಚ್ಚಿನ ಪ್ರಕರಣಗಳು ಕ್ರಮಬದ್ಧವಾಗಿದ್ದು ಘಟನೋತ್ತರ ಅನುಮೋದನೆ ನೀಡಲು ಪರಿಗಣಿಸಲಾಗುತ್ತಿದೆ. ಕಛೇರಿಯಲ್ಲಿ ಈ ರೀತಿಯ ನ್ಯೂನ್ಯತೆಗಳು / ಅಕ್ರಮ ಆದೇಶಗಳು ಉಂಟಾಗಿರುವುದನ್ನು ನಿಯಂತ್ರಿಸುವಲ್ಲಿ ಅಸಮರ್ಪಕರಾದ ತಹಶೀಲ್ದಾರರು ಮತ್ತು ಅವರ ಸಿಬ್ಬಂದಿಗಳ ಮೇಲೂ ವಿಚಾರಣೆಗೊಳಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಾನ್ಯ ಸದಸ್ಯರು ಮಾಡಿರುವ ಆರೋಪಗಳು ಗಂಭೀರ ಸ್ವರೂಪವಾದ್ದರಿಂದ ನ್ಯೂನ್ಯತೆಗಳನ್ನು ಎಸಗಿರುವ ಮೇಲ್ಕಂಡ ಮೂವರು ಸಿಬ್ಬಂದಿಗಳ ಮೇಲೆ ಇಲಾಖಾ ವಿಚಾರಣೆ ನಡೆಸಲಾಗುತ್ತಿದ್ದು, ಉಳಿದ ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಿ, ಯಾವುದೇ ವಿನಾಯಿತಿ ಇಲ್ಲದೇ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಕಛೇರಿಗಳಲ್ಲಿ ಪರಿಸ್ಥಿತಿ ಏನಾಗಿದೆಯೆಂದರೆ, ಖಾತೆ ಬದಲಾವಣೆ ಕುರಿತಂತೆ ತಮಗೂ ಅನುಭವವಾಗಿದೆ. 6-6 ತಿಂಗಳಾಗಬೇಕು, ರೈತರು ಓಡಾಡಿ, ಓಡಾಡಿ ಕೈ-ಕಾಲುಗಳೆಲ್ಲವೂ ಸುಸ್ತಾಗಬೇಕು. ಆತ ತನ್ನ ಮೈಮೇಲಿನ ಬಟ್ಟೆಯನ್ನೆಲ್ಲಾ ಹರಿದುಕೊಂಡಿರುತ್ತಾರೆ. ಈ ಸಂಬಂಧ ಸುಮಾರು 800 ಫೈಲುಗಳನ್ನು ನಾನು ಇನ್ಸ್‌ಪೆಕ್ಷನ್ ಮಾಡಿಸಿದ್ದೇನೆ. ಅಲ್ಲಿ ಪರಿಸ್ಥಿತಿ ಏನಾಯಿತೆಂದರೆ, ನಾಗಲಾಪುರದ ಒಬ್ಬ ವಿಧವೆಯೊಬ್ಬಳ ಕೇಸ್ ರೆಫರ್ ಆಗಿದೆ. ಆಕೆಯ ಜಮೀನನ್ನು ಬೇರೆಯವರಿಗೆ ಖಾತೆ ಮಾಡಿಸಿಕೊಡುವ ಮೂಲಕ ರಿಜಿಸ್ಟ್ರೇಶನ್ ನಡೆಯುತ್ತಿತ್ತು. ನಾನು ಅನಿರೀಕ್ಷಿತವಾಗಿ ತಾಲ್ಲೂಕು ಕಛೇರಿಗೆ ಹೋದಾಗ ಆಕೆ ಅಳುತ್ತಿದ್ದಳು. ಪರಿಸ್ಥಿತಿ ಏನೆಂದು ವಿಚಾರಿಸಿದಾಗ ಆಕೆ ಎಲ್ಲವನ್ನೂ ವಿವರಿಸಿದಳು. ಕೂಡಲೇ ನಾನು ಆ ರಿಜಿಸ್ಟ್ರೇಶನ್ ಅನ್ನು ನಿಲ್ಲಿಸಿದೆ. ನಾನು ಈ ವಿಚಾರವನ್ನು ಕೆಡಿಪಿ ಮೀಟಿಂಗ್‌ನಲ್ಲೂ ಪ್ರಸ್ತಾಪಿಸಿದಾಗ

ಜಿಲ್ಲಾ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್ ಅವರೂ ಇದ್ದರು. ಪ್ರಕರಣ ಈಗ ಇನ್ನೂ ಇದೇ ಹಂತದಲ್ಲಿದೆ.

ಇವತ್ತು ಒಂದೆರಡಲ್ಲ, ನೀಡಿರುವ ಮಾಹಿತಿ ತುಂಬಾ ತಪ್ಪು ಇದೆ. ಈ ಕುರಿತು ನಾನು ಸಿ.ಡಿ. ಮಾಡಿಸಿದ್ದು, ಕಂದಾಯ ಸಚಿವರಾದ ತಮಗೆ ಕಳುಹಿಸಿಕೊಡುತ್ತೇನೆ. ಸುಮಾರು 400 ಪ್ರಕರಣಗಳಿಗೆ ಸಂಬಂಧಿಸಿದಂತೆ, ಎ.ಸಿ.ಯೂ ಇಲ್ಲ, ಡಿ.ಸಿ.ಯೂ ಇಲ್ಲ, ಎಲ್ಲವನ್ನೂ ಕೋರ್ಟ್ ಆದೇಶದ ಮೇಲೆ ಟ್ಯಾಂಪರ್ ಮಾಡಿ ರಿಜಿಸ್ಟ್ರೇಶನ್ ಮಾಡಿಸಿದ್ದಾರೆ, ಖಾತೆ ಬದಲಾವಣೆ ಮಾಡಿದ್ದಾರೆ. ಒಂದೆರಡಲ್ಲ, ಸುಮಾರು 800 ಪ್ರಕರಣಗಳು. ಈ ಫೈಲ್‌ಗಳು ಇನ್ನೂ ಸಿಗುತ್ತಿಲ್ಲ. ಈ ಬಗ್ಗೆ ಸರ್ಕಾರದಿಂದ ಆದೇಶಿಸಲಾಗಿದ್ದು, ಎನ್‌ಕ್ವೇರಿಗೆ ಕಳುಹಿಸಿದ್ದಾರೆ. ಆದರೆ, ಎನ್‌ಕ್ವೇರಿ ರಿಪೋರ್ಟ್ ಇನ್ನೂ ಬಂದಿಲ್ಲ. ಡಿ.ಸಿ.ಯವರೇ ಸಸ್ಪೆಂಡ್ ಮಾಡಿದರು. ಮಾನ್ಯ ಕರುಣಾಕರರೆಡ್ಡಿಯವರೆ, ತುಮಕೂರು ಡಿ.ಸಿ. ಕಛೇರಿ ಯಾವ ಮಟ್ಟದಲ್ಲಿ ಕೆಟ್ಟಿದೆಯೆಂದರೆ, ಹೇಳಲೂ ಅಸಹ್ಯವಾಗುತ್ತದೆ. ಸಸ್ಪೆಂಡ್ ಆದ ಕೇವಲ 15 ದಿವಸಗಳಲ್ಲಿಯೇ ಆತನನ್ನು ರಿವೋಕ್ ಮಾಡಿ ಅದೇ ಸ್ಥಾನಕ್ಕೆ ನೇಮಿಸಿದ್ದಾರೆ. ಇದು ಬಹಳ ಮುಖ್ಯವಾದ ಸಮಸ್ಯೆಯಾಗಿದೆ. ಈಗ ಅರ್ಧ ಎಕರೆ, ಒಂದು ಎಕರೆಗೆ ಸಂಬಂಧಿಸಿದಂತೆಲ್ಲಾ ಮರ್ಡರ್‌ಗಳಾಗುತ್ತವೆ. ಅಧ್ಯಕ್ಷರೆ, ತಾವೂ ಹಳ್ಳಿಯಿಂದ ಬಂದಿದ್ದೀರಿ. ನಮ್ಮ ತಾತ, ಮುತ್ತಾತನವರ ಕಾಲದಿಂದಲೂ ಪಿತ್ರಾರ್ಜಿತವಾಗಿ ಬಂದಿದ್ದ ಜಮೀನಿಗೆ ಸಂಬಂಧಿಸಿದಂತೆ ದುಡ್ಡು ತೆಗೆದುಕೊಂಡು ಏಕಾಏಕಿ ಟ್ಯಾಂಪರ್ ಮಾಡಿ ಖಾತೆ ಬದಲಾವಣೆ ಮಾಡಿದರೆ, ಆ ಕುಟುಂಬದ ಭವಿಷ್ಯ ಏನಾಗಬೇಕು ? ದಯಮಾಡಿ ಅರ್ಥ ಮಾಡಿಕೊಳ್ಳಬೇಕು. It is very serious case. ಹಾಗಾಗಿ, ಹಳ್ಳಿಗಳ ಕಡೆ ಅರ್ಧ ಎಕರೆ, ಒಂದೊಂದು ಗುಂಟೆ ಜಮೀನಿಗೂ ಮರ್ಡರ್‌ಗಳಾಗುತ್ತವೆ. ಭೂಮಿಯನ್ನು ಬೇರೆಯವರಿಗೆ ಖಾತೆ ಮಾಡಿಸಿಕೊಟ್ಟು, ಬೆಂಗಳೂರಿನಲ್ಲಿರುವ ರಿಯಲ್ ಎಸ್ಟೇಟ್ ಮಾಡುವವರಿಗೆ, ಕುಮ್ಮಕ್ಕು ನೀಡುವ ಅಧಿಕಾರಿಗಳಿಗೆ ಶೆಲ್ಟರ್ ಒದಗಿಸಿಕೊಡುವುದೆಂದರೆ ಏನರ್ಥ ?

ನಾನು ಸನ್ಮಾನ್ಯ ಸಚಿವರಲ್ಲಿ ಕೇಳುವುದಿಷ್ಟೆ, ಯಾವ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ ಬಳಿಕ 15 ದಿವಸದೊಳಗೆ ಅವರನ್ನು ರಿವೋಕ್ ಮಾಡಿರುವ ಉದ್ದೇಶವಾದರೂ ಏನು ? ಡಿ.ಸಿ.ಯವರು ಏಕೆ ರಿವೋಕ್ ಮಾಡಿದರು ? ಅವರಿಗೆ ಪೂರ್ಣ ವಿಷಯ ಗೊತ್ತಿದೆ. ಇದರ ವಿಚಾರವಾಗಿ ಕೆಡಿಪಿ ಮೀಟಿಂಗ್‌ನಲ್ಲಿ ಸನ್ಮಾನ್ಯ ಸುರೇಶ್‌ಕುಮಾರ್‌ರವರ ಉಪಸ್ಥಿತಿಯಲ್ಲಿ ಗಂಟೆಗಟ್ಟಲೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಕ್ರಮ ಜಗುರಿಸಬೇಕೆಂದು ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಹೇಳಿದ್ದರೂ, ಇನ್ನೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಬಡವರ ಜಮೀನು ಹಾಳಾಗಬಾರದು. ಯಾರ್‍ಯಾರದೋ ಭೂಮಿಯನ್ನು ಖಾತೆ ಮಾಡಿಕೊಂಡು ಬೆಂಗಳೂರಿನಲ್ಲಿರುವವರು ರಿಯಲ್ ಎಸ್ಟೇಟ್ ಮಾಡುವುದಾದರೆ, ರೈತರ ಗತಿ ಏನಾಗಬೇಕು ? ಆದುದರಿಂದ, ನಾನು ಹೇಳುವುದಿಷ್ಟೆ, ಎಲ್ಲರನ್ನೂ ಸಸ್ಪೆಂಡ್ ಮಾಡಿ ಕೂಡಲೇ ಅವರುಗಳ ವಿರುದ್ಧ ಕ್ರಿಮಿನಲ್ ಕೇಸ್ ಫೈಲ್ ದಾಖಲಿಸಬೇಕು. ತಹಸೀಲ್ದಾರ್ ಆಗಲಿ, ವಿಲೇಜ್ ಅಕೌಂಟೆಂಟ್ ಆಗಲಿ ಇವತ್ತು ಕಂಪ್ಯೂಟರ್ ಮೂಲಕ ಆಪರೇಟ್ ಮಾಡಿಕೊಂಡು ಕುಳಿತುಕೊಂಡು ಬಿಟ್ಟರೆ ಆಡಳಿತ ಉಳಿಯುತ್ತದೆಯೇ? ಹಾಗಿದ್ದರೆ, ಎಂಎಲ್‌ಎ, ತಹಸೀಲ್ದಾರ್, ಎ.ಸಿ.ಯಾದರೂ ಏಕೆ ಬೇಕು? The great mistake is Court Order. ಅದು ತಪ್ಪಲ್ಲವೇ ? where is the Court Order ? ತಾಲ್ಲೂಕು ಕಛೇರಿಯಲ್ಲಿ ಒಂದು ಫೈಲೂ ಸಿಕ್ಕುವುದಿಲ್ಲ. ನಾನು ಇದನ್ನು ತೆಗೆದುಕೊಳ್ಳಬೇಕಾದರೆ ಸುಮಾರು ಮೂರು ತಿಂಗಳುಗಳಾಗಿವೆ. ಡಾಕ್ಯುಮೆಂಟ್ಸ್ ಇಲ್ಲ. ಹಾಗಾಗಿ, ನಾನು ಬೆಂಗಳೂರಿಗೆ ಬಂದು ನಾರಾಯಣಸ್ವಾಮಿಯವರ ಅವರಿಂದ ಲೆಟರ್ ತೆಗೆದುಕೊಂಡು ಪರ್ಮಿಶನ್ ತೆಗೆದುಕೊಂಡಿದ್ದೇನೆ. ಇಂತಹ ಟ್ಯಾಂಪರ್ ಮಾಡುವ ಮೂಲಕ ನೇರವಾಗಿ ರೈತರಿಗೆ ಚೀಟ್ ಮಾಡುತ್ತಿದ್ದೀರೆಂದರೆ ಏನರ್ಥ? ಅಂತಹವರಿಗೆ ಶೆಲ್ಟರ್ ಕೊಡಬೇಕೇ? ತಮ್ಮ ಉತ್ತರದಲ್ಲಿ ಸಾಬೀತಾಗಿದೆ ಎಂದು ಹೇಳುತ್ತೀರಿ. ಅವರ ವಿರುದ್ಧ ಇನ್ನೇನು ಎನ್‌ಕ್ವೇರಿ ಮಾಡಬೇಕು ? ದಯಮಾಡಿ ಎಲ್ಲರನ್ನೂ ಸಸ್ಪೆಂಡ್ ಮಾಡಿ ಅವರ ವಿರುದ್ಧ ಕ್ರಿಮಿನಲ್ ಕೇಸ್‌ಗಳನ್ನು ದಾಖಲಿಸಿ. ಎನ್‌ಕ್ವೇರಿ

ಮಾಡಬೇಕು. ಜೊತೆಗೆ, ಯಾರ್ಯಾರದು ಟ್ಯಾಂಪರ್ ಆಗಿದೆಯೋ, ಅವರಿಗೆಲ್ಲಾ ಮರು ಖಾತೆ ಮಾಡಿಕೊಡುವುದಕ್ಕೆ ಸರ್ಕಾರದಿಂದ ಆದೇಶವಾಗಬೇಕು. ಇಲ್ಲದಿದ್ದರೆ, ಬಡವರಿಗೆ ನ್ಯಾಯ ಸಿಗುವುದಿಲ್ಲ. ದಯಮಾಡಿ ಇದರ ಬಗ್ಗೆ ಗಂಭೀರವಾಗಿ ಚಿಂತಿಸಬೇಕು.

ಶ್ರೀ ಜಿ. ಕರುಣಾಕರರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಸಭೆ ಮುಖಾಂತರ ನಾನು ಇದಕ್ಕೆ ಸಂಬಂಧಿಸಿದಂತೆ ಇನ್ನು 15 ದಿವಸದೊಳಗಾಗಿ ವರದಿ ತರಿಸಿಕೊಂಡು, ಯಾವುದೇ ಮುಲಾಜಿಲ್ಲದೆ ಅವರ ವಿರುದ್ಧ ಕಠಿಣವಾದ ಶಿಸ್ತು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಕರುಣಾಕರರೆಡ್ಡಿಯವರೆ, ಒಟ್ಟು 197 ಪ್ರಕರಣಗಳ ಪೈಕಿ 195 ಪ್ರಕರಣಗಳಿಗೆ ಸಂಬಂಧಿಸಿದಂತೆ ಆರ್.ಟಿ.ಸಿ. ಬದಲಾವಣೆ ಮಾಡಲಾಗಿರುವುದು ತನಿಖೆಯಿಂದ ಕಂಡು ಬಂದಿರುತ್ತದೆಂದು ನೀವೇ ಹೇಳಿಕೆಯಲ್ಲಿ ತಿಳಿಸಿದ್ದೀರಿ. ಮತ್ತೆ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳುತ್ತೇನೆಂದರೆ, ಹೇಗೆ ?

ಶ್ರೀ ಜಿ. ಕರುಣಾಕರರೆಡ್ಡಿ : ಮೇಲ್ನೋಟಕ್ಕೆ ಕಂಡು ಬಂದಿದೆ. ಅದರ ಬಗ್ಗೆ ಪೂರ್ತಿ ವರದಿ ಕೇಳಿದ್ದೇವೆ, ತೆಗೆದುಕೊಳ್ಳುತ್ತೇನೆ. ವರದಿ ಬಂದ ನಂತರ ಕ್ರಮ ಕೈಗೊಳ್ಳುತ್ತೇನೆ. ನಮಗೆ ಯಾವುದೇ ಮುಲಾಜಿಲ್ಲ. ನಾನು ಯಾರನ್ನೂ ಶೆಲ್ಟರ್ ಮಾಡುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ : ದಯಮಾಡಿ suspension Order issue ಮಾಡಿ. Suspension is not a punishment.

ಶ್ರೀ ಡಿ.ಕೆ. ಶಿವಕುಮಾರ್ : ತಹಸೀಲ್ದಾರ್ ಮತ್ತು ಎ.ಸಿ.ಯವರಿಂದ ರಿಪೋರ್ಟ್ ಬಂದಿದೆಯೆಂದು ನೀವೇ ಉತ್ತರದಲ್ಲಿ ತಿಳಿಸಿದ್ದೀರಿ.

ಶ್ರೀ ಎಂ.ಟಿ. ಕೃಷ್ಣಪ್ಪ : ರೆಡ್ಡಿಯವರೆ, ಅವರು ರೆಕಾರ್ಡ್‌ಗಳನ್ನೆಲ್ಲಾ ಟ್ಯಾಂಪರ್ ಮಾಡುತ್ತಾರೆಂಬ ಉದ್ದೇಶದಿಂದಲೇ ಅವರುಗಳನ್ನು ಸಸ್ಪೆನ್‌ಶನ್ ಮಾಡುವುದು.

ಶ್ರೀ ಜಿ. ಕರುಣಾಕರರೆಡ್ಡಿ : ಇನ್ನೂ ಯಾವ ರೀತಿಯ ಕಠಿಣ ಕ್ರಮ ಕೈಗೊಳ್ಳಬೇಕೋ, ಕೈಗೊಳ್ಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಕ್ರಮ ಕೈಗೊಳ್ಳುವುದು later stageನಲ್ಲಿ.

ಅಧ್ಯಕ್ಷರು : ಅವರು 15 ದಿವಸಗಳ ಕಾಲ ಟೈಮ್ ಲಿಮಿಟ್ ಹಾಗಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಡಾಕ್ಯುಮೆಂಟೇಶನ್ ತಿದ್ದುವುದು ಸಣ್ಣ ಕೆಲಸವೇ ?

ಅಧ್ಯಕ್ಷರು : 15 ದಿವಸದೊಳಗೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. It is an assurance.

ಶ್ರೀ ಎಂ.ಟಿ. ಕೃಷ್ಣಪ್ಪ : ಸಸ್ಪೆನ್‌ಶನ್ ಮಾಡುವುದಕ್ಕೂ ಕ್ರಮ ಏನು ಸಂಬಂಧ ? ನೀವು ಕಾನೂನು ಗೊತ್ತಿಲ್ಲದೆ ಮಾತನಾಡುತ್ತಿದ್ದೀರಲ್ಲ.

Mr. Speaker : That includes everything.

ಶ್ರೀ ಎಂ.ಟಿ. ಕೃಷ್ಣಪ್ಪ : It is very bad. ತಪ್ಪು, ತಪ್ಪು, ನೀವೇ ತಪ್ಪು ಮಾಹಿತಿ ಹೇಳುತ್ತಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ : ಸರ್ಕಾರ ಇಲ್ಲಿ ಹೇಳಿಕೆ ಕೊಡುವ ಸಂದರ್ಭದಲ್ಲಿ .. ..

ಅಧ್ಯಕ್ಷರು : ಕ್ರಮ ಕೈಗೊಳ್ಳುವುದಾಗಿ ಮಾನ್ಯ ಸಚಿವರು ಹೇಳಿದ್ದಾರಲ್ಲ. ಮತ್ತೆ ಈ ಕುರಿತಾದ ಚರ್ಚೆ ಬೇಡ. ಇದು ನಿಮ್ಮ ಜಿಲ್ಲೆಗೆ ಸಂಬಂಧಿಸಿರುವ ವಿಚಾರವಾಗಿದೆ. 15 ದಿವಸದೊಳಗಾಗಿ ವರದಿ ತರಿಸಿಕೊಂಡು ಎಲ್ಲಾ ರೀತಿಯ ಕ್ರಮಗಳನ್ನೂ ಕೈಗೊಳ್ಳುತ್ತೇನೆಂದು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ನಡೆದಿರುವ ದ್ರೋಹ ಎಂತಹುದು? ಅವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲವೇ? ಈಗ 197 ಪ್ರಕರಣಗಳಲ್ಲಿ ಅಸಿಸ್ಟೆಂಟ್ ಕಮೀಷನರ್ ಅವರ ಮೊಹರು ಅಂದರೆ, ಅವರದೇ ಆದೇಶವಾಗಿದೆಯೆಂದು wrong entry ಮಾಡಿದ್ದಾರೆಂದರೆ, ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಒಂದು

ಮಾತನ್ನು ಹೇಳಲು ತೊಂದರೆ ಏನಿದೆ ? Criminal action also ಎಂದು ಹೇಳಿ. ಅದರ ಬಗ್ಗೆ ಕಡತದಲ್ಲಿ ದಾಖಲಾಗಬೇಕು, ಮೆಸೇಜ್ ಹೋಗಬೇಕು. ಈ ತರಹ ತಪ್ಪು ಮಾಡಿದರೆ, ನಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಾರೆಂಬ ಭಯ ಬರಬೇಕು.

ಶ್ರೀ ಜಿ. ಕರುಣಾಕರರೆಡ್ಡಿ : ವರದಿ ಬಂದ ನಂತರ ಕ್ರಿಮಿನಲ್ ಕೇಸ್ ಹಾಕುತ್ತೇವೆ. ಮತ್ತು ಏನು ಕ್ರಮ ಕೈಗೊಳ್ಳಬೇಕೋ ಕೈಗೊಳ್ಳುತ್ತೇವೆ. ಅದರ ಬಗ್ಗೆ ಚಿಂತೆ ಏನು ಇಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ : ನೀವು ದಯಮಾಡಿ ಕೇಳಬೇಕು. ಇದೇನೆಂದು ನನಗೆ ಅರ್ಥವಾಗುತ್ತಿಲ್ಲ. I am sorry. ನೀವು ಕ್ರಮ ಕೈಗೊಳ್ಳುವುದು after the enquiry. Please here me. ಎನ್‌ಕ್ವೇರಿಯಾಗುವಾಗ ನೀವು ಕ್ರಮ ಕೈಗೊಳ್ಳಿ. ನೀವು ಡಿಸ್‌ಮಿಸ್ ಮಾಡಿರುವುದರ ಬಗ್ಗೆ ನಾನು ಹೇಳುತ್ತಿಲ್ಲ. They can tamper the records. ನಾನು ನಿಮಗೆ ಏನು ಹೇಳುತ್ತಿದ್ದೇನೆಂದರೆ, suspension is not a punishment. ಇದರ ಬಗ್ಗೆ KCSRನಲ್ಲಿ ಸ್ಪಷ್ಟವಾಗಿದೆ. ಸಸ್ಪೆನ್‌ಶನ್ ಮಾಡುವ ಉದ್ದೇಶ ಫೈಲುಗಳು ಟ್ಯಾಂಪರ್ ಆಗಬಾರದೆಂದು ಅವರಿಂದ ಫೈಲುಗಳನ್ನು ದೂರವಿಡುತ್ತಾರೆ. ನೀವು ಅವರನ್ನು ಅಲ್ಲಿಯೇ ಬಿಟ್ಟರೆ ಅವರು ಎಲ್ಲವನ್ನೂ ಟ್ಯಾಂಪರ್ ಮಾಡಿದಾಗ ನೀವು ಏನು ಕ್ರಮ ಕೈಗೊಳ್ಳುತ್ತೀರಿ? ರೈಟಿಂಗ್‌ನಲ್ಲೂ ಇಲ್ಲ. Only computer. ಕಂಪ್ಯೂಟರ್ ಮೂಲಕ ತಿದ್ದದಿರುವಂತೆ ಅಲ್ಲಿ ಇಬ್ಬರು ಪೊಲೀಸರನ್ನು ಹಾಕಿಸಿದ್ದೇನೆ. ಅವರು ರಾತ್ರಿ ಹೊತ್ತು ಟ್ಯಾಂಪರ್ ಮಾಡಿದರೆ, ನೀವು ಏನು ಕ್ರಮ ಕೈಗೊಳ್ಳುತ್ತೀರಿ? ಇದರಿಂದ 800 ರೈತರು ಹಾಳಾಗಬೇಕೇ? ಇದು ನನ್ನ ಭೂಮಿ ಏನಲ್ಲ ರೈತರ ಭೂಮಿ, ಅವರು ತಮ್ಮ ಓಟು ನೀಡಿ ನನ್ನನ್ನು ಎಂಎಲ್‌ಎ ಮಾಡಿದ್ದಾರೆ. ನಾವು ಅವರ ಋಣ ತೀರಿಸಬೇಕಾಗಿದೆ. ಆದುದರಿಂದ, ನೀವು suspension Order issue ಮಾಡಬೇಕು.

ಶ್ರೀ ಜಿ. ಕರುಣಾಕರರೆಡ್ಡಿ : ಟ್ಯಾಂಪರ್ ಮಾಡಿ ತಪ್ಪೆಸಗಿದ್ದರೆ, ಅವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕೋಣವೆಂದು ಹೇಳಿದ್ದೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಸಸ್ಪೆನ್‌ಶನ್ ಎನ್ನುವುದು ಅವರಿಗೆ ಪನಿಶ್‌ಮೆಂಟ್ ಆಗುವುದಿಲ್ಲ. ಅವರು ಅಲ್ಲಿಯೇ ಉಳಿದುಕೊಂಡರೆ, ರೆಕಾರ್ಡ್‌ಗಳನ್ನು ಟ್ಯಾಂಪರ್ ಮಾಡುತ್ತಾರೆ. ಅದು ಎನ್‌ಕ್ವೇರಿಯಿಂದ ಸಾಬೀತಾಗುವುದಿಲ್ಲ. ಎನ್‌ಕ್ವೇರಿಯನ್ನೂ ಮಾಡುವುದಕ್ಕಾಗುವುದಿಲ್ಲ. ನಾವು ಇಲ್ಲಿಂದ ಹೋದ ತಕ್ಷಣವೇ ನಾರಾಯಣಸ್ವಾಮಿಯವರು ಎನ್‌ಕ್ವೇರಿ ರಿಪೋರ್ಟ್ ಕಳುಹಿಸಿದ್ದಾರೆ. ಇನ್ನೂ ರಿಪೋರ್ಟ್ ಬಂದಿಲ್ಲ. ಈಗಾಗಲೇ ಒಂದೂವರೆ ತಿಂಗಳಾಯಿತು. ಇವತ್ತು ಏನಾಗಿದೆಯೆಂದರೆ, ಎಲ್ಲವನ್ನೂ ಟ್ಯಾಂಪರ್ ಮಾಡುತ್ತಾರೆ. suspension order ಮಾಡಿ ಎನ್‌ಕ್ವೇರಿ ಮಾಡಿ ಪ್ರೂವ್ ಆದ ಮೇಲೆ you file a case. ಅಲ್ಲಿಯವರೆಗೂ ನೀವು ರೈತರನ್ನು ಉಳಿಸಬೇಕು. ಮತ್ತೊಂದು ಆದೇಶವಾಗಬೇಕಿರುವುದೇನೆಂದರೆ, ಅವೆಲ್ಲವನ್ನೂ ರಿವರ್ಸ್ ಮಾಡಿ ರೈತರಿಗೆ ಪುನಃ ಖಾತೆ ಮಾಡಿಸಿಕೊಡಬೇಕು. ಇಲ್ಲದಿದ್ದರೆ, ಅವರೆಲ್ಲರಿಗೂ ಬಹಳ ಕಷ್ಟವಾಗುತ್ತದೆ. ಬಡವರಾಗಿರುವ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇದರಲ್ಲಿ ಅನೇಕ ವಿಧವೆಯರಿದ್ದಾರೆ. ನನಗೆ ವಿಷಯ ಅರ್ಥವಾಗುವುದಿಲ್ಲ. ಅದೇ ಪರಿಸ್ಥಿತಿ ಬಂದಿರೋದು !

ಶ್ರೀ ಜೆ. ಕರುಣಾಕರರೆಡ್ಡಿ : ಸ್ವಾಮಿ, ನಿಮ್ಮ ವಿಷಯವನ್ನು ನಾನು ಚೆನ್ನಾಗಿ ಓದಿದ್ದೇನೆ, ಅರ್ಥವಾಗಿದೆ. ಮಾತು ಮಾತಿಗೂ ಅದನ್ನು ಹೇಳುವ ಅಗತ್ಯವಿಲ್ಲ. ನಾನು ಇದಕ್ಕೆ ಸಂಬಂಧಿಸಿದಂತೆ 15 ದಿವಸದೊಳಗೆ ಕ್ರಮ ಕೈಗೊಳ್ಳುತ್ತೇನೆ, ಮತ್ತು ವರದಿ ಬಂದ 2 ದಿವಸದೊಳಗೂ ಕ್ರಮ ಕೈಗೊಳ್ಳುತ್ತೇನೆ. ನನ್ನ ಉತ್ತರ ಇಷ್ಟೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಅವರು ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು: ಅವರು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಇದನ್ನು ಮುಕ್ತಾಯ ಮಾಡಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮೊದಲು ಅಲ್ಲಿರುವ ದಾಖಲೆಗಳನ್ನು seize ಮಾಡಿಸಿ. ಅನಂತರ ವರದಿ ಬಂದಮೇಲೆ ಯಾವತ್ತಾದರೂ ವೆರಿಫೈ ಮಾಡಿಕೊಳ್ಳುವಿರಂತೆ.

6.00 ಪಿ.ಎಂ.

ಅಧ್ಯಕ್ಷರು: ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: Records ಮತ್ತು ಅವರನ್ನೇ ಬಿಟ್ಟು ಈ ರೀತಿ ಮಾಡಿದರೆ ಹೇಗೆ? ಮೊದಲು Records ನ್ನು seize ಮಾಡಿ ಇಡಿ. ಅವರು ಅಲ್ಲೇ ಕೆಲಸ ಮಾಡುತ್ತಿದ್ದರೆ ಹೇಗಾಗುತ್ತದೆ?

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿ ತಾವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಕೆ. ಕರುಣಾಕರರೆಡ್ಡಿ: ಅಲ್ಲಿರುವ records ಗಳನ್ನೆಲ್ಲಾ ಭದ್ರ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ವರದಿ ಬಂದ ಕೂಡಲೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಅದು ಆಗುವುದಿಲ್ಲ. ನಾವು ಬಾವಿಯಲ್ಲಿ ಬಂದು ಧರಣಿ ಮಾಡುತ್ತೇವೆ.

ಅಧ್ಯಕ್ಷರು: ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಇದು ಗಮನ ಸೆಳೆಯುವ ಸೂಚನೆ. ತಾವು ಹೀಗೆ ಮಾಡಿದರೆ ಹೇಗೆ? ಎನ್.ಸಂಪಂಗಿಯವರು ಪ್ರಸ್ತಾಪ ಮಾಡಿ.

(ಈ ಹಂತದಲ್ಲಿ ಶ್ರೀ ಎಂ.ಟಿ. ಕೃಷ್ಣಪ್ಪ, ಶ್ರೀ ಕರಡಿಸಂಗಣ್ಣ, ಶ್ರೀ ಕೆ.ಎಂ. ಶಿವಲಿಂಗೇಗೌಡ, ಶ್ರೀ ವೆಂಕಟರಾವ್ ನಾಡಗೌಡ, ಮುಂತಾದ ಸದಸ್ಯರು ಬಾವಿಯಲ್ಲಿ ಧರಣಿ ಹೂಡಿದರು)

ಅಧ್ಯಕ್ಷರು : ಸಚಿವರು ಸ್ಪಷ್ಟವಾದ ಉತ್ತರ ಕೊಟ್ಟಮೇಲೂ ತಾವು ಈ ರೀತಿ ಮಾಡುವುದು ಸರಿಯಲ್ಲ. ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ವಿನಂತಿ ಮಾಡುತ್ತೇನೆ, ಅದರ ಬಗ್ಗೆ ಗಂಬೀರವಾಗಿಯೇ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಸಂಪಂಗಿಯವರೆ ತಾವು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಸಚಿವರು): ಅವರು ಪದೇ ಪದೇ ಇದೇ ರೀತಿ ಉತ್ತರ ಕೊಡಬೇಕೆಂದರೆ ಸರಿಯಲ್ಲ. ಸಚಿವರು 15

ದಿವಸದಲ್ಲಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಇನ್ನೂ 30ನೇ ತಾರೀಖಿನವರೆಗೆ ಅಧಿವೇಶನವಿದೆ. Recordsನ್ನು seize ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) ಯಾವುದೇ ಮುಲಾಜಿಲ್ಲದೆಯೆ ಆ ವರದಿಯ ಆಧಾರದ ಮೇಲೆ ತೀವ್ರತರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ. ಕ್ರಮ ಕೈಗೊಂಡು ತಕ್ಷಣ ಸದನದ ಗಮನಕ್ಕೆ ತರುತ್ತೇವೆ. ದಯಮಾಡಿ ಸಹಕರಿಸಿ. ಈ ರೀತಿ ಎಳೆದುಕೊಂಡು ಹೋಗುವುದು ಬೇಡ. ನಾವೇನು ಅಧಿಕಾರಿಗಳ ಪರವಾಗಿಲ್ಲ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಕರುಣಾಕರರೆಡ್ಡಿ: ಜಿಲ್ಲಾಧಿಕಾರಿಯವರಿಗೆ ಸೂಚನೆ ಕೊಟ್ಟು ತಕ್ಷಣವೇ ಆ recordsನ್ನು seize ಮಾಡುವುದಕ್ಕೆ ಹೇಳುತ್ತೇನೆ.

(ಈ ಹಂತದಲ್ಲಿ ಶ್ರೀ ಎಂ.ಟಿ. ಕೃಷ್ಣಪ್ಪ, ಶ್ರೀ ಕರಡಿಸಂಗಣ್ಣ, ಶ್ರೀ ಕೆ.ಎಂ. ಶಿವಲಿಂಗೇಗೌಡ, ಶ್ರೀ ವೆಂಕಟರಾವ್ ನಾಡಗೌಡ, ಮುಂತಾದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಇ) ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಬ್ಯಾರೇಜ್ ನಿರ್ಮಿಸಿರುವ ಬಗ್ಗೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಕುಡಿಯುವ ನೀರಿಗೆ ಬ್ಯಾರೇಜ್ ನಿರ್ಮಿಸಿದ್ದು, ಈ ಬ್ಯಾರೇಜ್ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಒಳಪಟ್ಟಿರುತ್ತದೆ. ಈ ಬ್ಯಾರೇಜಿನ ಸುತ್ತಮುತ್ತ ತ್ಯಾಜ್ಯ ವಸ್ತುಗಳನ್ನು ಹಾಕಿ, ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ಕುಡಿಯುವ ನೀರಿನ ಗುಣಮಟ್ಟ ಹದಗೆಟ್ಟಿರುವುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಬಾಗೇಪಲ್ಲಿ ಗುಡಿಬಂಡೆ ಹಾಗೂ